# ಹಿರಿಯ ಸಿವಿಲ್ ನ್ಯಾಯಾಲಯ, ಚಿತ್ತಾಪೂರ

ಅಸಲು ದಾವಾ ನಂಃ **32/2017**
ಪಿ.ಡಬ್ಲ್ಯೂಃ **2.**

ದಿನಾಂಕ **15-03-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಪಾಟಿ ಸವಾಲು :- ಶ್ರೀ ಕೆ ಜಿ ಕೆ ವಕೀಲರಿಂದ

ನಾನು ಮೊದಲಿನಿಂದಲೂ ಗುಲಬರ್ಗಾದ ನಗರದಲ್ಲಿರುತ್ತೇನೆ. ಗುಲಬರ್ಗಾದ ಆಶ್ರಯ ಮನೆಯಲ್ಲಿ ವಾಸ ಮಾಡುತ್ತೇನೆ ಅನ್ನುವುದು ನಿಜ. ಶಿವಯೋಗಪ್ಪನಿಗೆ ಇಬ್ಬರು ಹೆಂಡತಿಯರು. ನಾನು ಮೊದಲ ಹೆಂಡತಿ ರುಕ್ಮೀಣಿ 2 ನೇ ಹೆಂಡತಿ. ರುಕ್ಮೀಣಿ 18 ವರ್ಷದವಳು ಇದ್ದಾಗ ವಾದಿ ಶಿವಯೋಗಪ್ಪನ ಜೊತೆ ಮದುವೆಯಾಗಿದೆ. ದಾವಾ ಆಸ್ತಿಗಳು ನೊಡಿದ್ದೇನೆ. 2 ಮನೆಗಳಲ್ಲಿ ನಮ್ಮಗೆ ಒಂದು ಮತ್ತು ವಾದಿಯರಿಗೆ ಒಂದು ಬಂದಿರುತ್ತದೆ. ಆದರೆ ಜಮೀನಿನಲ್ಲಿ ಪಾಲು ಆಗಿರುವುದಿಲ್ಲ. ಆದರೆ ಆ ಜಮೀನಿನನ್ನ ಒಂದು ಭಾಗದಲ್ಲಿ ಸಾಗುವಳಿ ಮಾಡುತ್ತಿದ್ದು ಇನ್ನೊಂದು ಭಾಗದಲ್ಲಿ ನಾವು ಸಾಗುವಳಿ ಮಾಡುತ್ತಿದ್ದೇವೆ.

ನನ್ನ ಗಂಡ 1990 ರಲ್ಲಿಯೇ ವಿಭಾಗವಾಗಿ ಬೇರೆಯಾಗಿದ್ದಾನೆ ಅನ್ನುವುದು ಸುಳ್ಳು. ಸದರಿ ಪಾಲಿನಲ್ಲಿ ಉತ್ತರ ದಿಕ್ಕಿನ ಜಮೀನು ನನ್ನ ಗಂಡನ ಪಾಲಿಗೆ ಮತ್ತು ದಕ್ಷಿಣ ದಿಕ್ಕಿನ ಜಮೀನು ಪ್ರತಿವಾದಿಯರ ಪಾಲಿಗೆ ಬಂದಿದೆ ಅನ್ನುವುದು ಸುಳ್ಳು. ಮನೆಯಲ್ಲಿ ಪೂರ್ವದ ಭಾಗ ಪ್ರತಿವಾದಿಗೆಯರಿಗೆ ಮತ್ತು ಪಶ್ಚಿಮ್ಮ ಭಾಗ ನಮ್ಮ ಪಾಲಿಗೆ ಇದೆ ಅನ್ನುವುದು ನಿಜ. ಈಗ ಮೇಲೆ ಹೇಳಿದಂತೆ 2 ಆಸ್ತಿಗಳು ಬೇರೆ ಬೇರೆಯಾಗಿ ಸ್ವಾಧೀನದಲ್ಲಿವೆ ಅಂದರೆ ಸಾಕ್ಷಿಯು ಮನೆಯಲ್ಲಿ ಮಾತ್ರ ಹಿಸ್ಸೆಯಾಗಿದ್ದು ಜಮೀನಿನಲ್ಲಿ ಆಗಿಲ್ಲ ಎಂದು ಹೇಳುತ್ತಾರೆ.

1995 ನಲ್ಲಿ ನನ್ನ ಮಗಳು ಮದುವೆಯಗೊಸ್ಕರ ನನ್ನ ಗಂಡ ಶರಣಪ್ಪನ ಬಳಿ ರೂ 50 ಸಾವಿರ ಸಾಲ ಪಡೆದಿದ್ದ ಮತ್ತು ಸದರ ಹಣ 1 ವರ್ಷದಲ್ಲಿ ವಾಪಸ ಕೊಡುತ್ತೇನೆ ಎಂದು ಕೈಡ ಪಡೆದುಕೊಂಡಿದ್ದ ಅನ್ನುವುದು ಸುಳ್ಳು. ಮುಂದೆ ನನ್ನ ಗಂಡನಿಗೆ ಸದರಿ ಸಾಲ ಪಾವತಿಸಲು ಆಗಿಲ್ಲ ಅಂದರೆ ಸರಿಯಲ್ಲ. 2000 ರ ಸಾಲಿನಲ್ಲಿ ನನ್ನ ಗಂಡ 2 ನೇ ಮದುವೆ ಮಾಡಿಕೊಳ್ಳಲು ರೂ 1 ಲಕ್ಷ ಸಾಲ ಪಡೆದಿದ್ದ ಅನ್ನುವುದು ಸುಳ್ಳು. ಮುಂದೆ ಆ 2 ಸಾಲ ತಿರಿಸಲಿಕೆ ಆಗದೆ ನನ್ನ ಗಂಡ ತನ್ನ ಪಾಲಿನ ಅರ್ಧ ಜಮೀನು ಮತ್ತು ಮನೆ ಸದರಿ ಶರಣಪ್ಪನಿಗೆ ಒಟ್ಟು ರೂ 1 ಲಕ್ಷ 51 ಸಾವಿರಕ್ಕೆ ಮಾರಾಟ ಮಾಡಿದ್ದಾನೆ ಅಂದರೆ ಸುಳ್ಳು, ಅದೇ ರೀತಿ ನನ್ನ ಗಂಡ ಆ ಆಸ್ತಿಗಳನ್ನು ಮಾರಾಟ ಮಾಡಲು ಶರಣಪ್ಪನಿಗೆ ಛಾಪಕಾಗದದ ಮೇಲೆ ಬರೆದುಕೊಟ್ಟಿದ್ದಾನೆ ಅನ್ನುವುದು ಸುಳ್ಳು. ಸದರಿ ಛಾಪಾ ಕಾಗದದ ಮೇಲೆ ನ್ನ ಗಂಡನ ತಂಗಿ ಸುಮಿತ್ರ ಮತ್ತು ಮಗ ಮೊನಪ್ಪ ಸಹಿ ಮಾಡಿದ್ದಾರೆ ಅನ್ನುವುದು ಸುಳ್ಳು.

**ಅಸಲು ದಾವಾ ನಂಃ 32/2017**
**ಪಿ.ಡಬ್ಲ್ಯೂಃ 2.**

ಆದ್ದರಿಂದ ಆ ನನ್ನ ಗಂಡನ ಅರ್ಧ ಪಾಲಿನ ಆಸ್ತಿ ಅಂದರೆ ಅರ್ಧ ಜಮೀನು ಮತ್ತು ಮನೆ ಶರಣಪ್ಪನ ಸ್ವಾಧೀನದಲ್ಲಿದ್ದು ಆತನೆ ಮಾಲಿಕನಾಗಿದ್ದಾನೆ ಅಂದರೇ ಸುಳ್ಳು. ಮುಂದುವರೆದು ನನ್ನ ಗಂಡ ಆ 2 ಆಸ್ತಿಗಳ ಬಗ್ಗೆ ಶರಣಪ್ಪನ ಹೆಸರಗೆ ಒಂದು ನೊಂದಾಯಿತ ಕ್ರ ಯ ಪತ್ರ ಮಾಡುತ್ತೇನೆ ಎಂದು ಮಾತು ಕೊಟ್ಟಿದ್ದಾನೆ ಅಂದರೆ ಸುಳ್ಳು. ಈಗಾಗಲೇ ನನ್ನ ಗಂಡ ಶರಣಪ್ಪನಿಗೆ ಆರ್ಧ ಮನೆ ಮತ್ತು ಜಮೀನು ಮಾರಾಟ ಮಾಡಿದ್ದು ಈ ಆಸ್ತಿಯಲ್ಲಿ ನಮಗೆ ಯಾವುದೆ ಹಕ್ಕು ಇಲ್ಲ ಅಂದರೆ ಸರಿಯಲ್ಲ. ನಾವು ಶರಣಪ್ಪನಿಗೆ ಸತ್ತಾಯಿಸಲು ಸುಳ್ಳು ದಾವೆ ಹಾಕಿದ್ದೇವೆ ಅನ್ನುವುದು ಸರಿಯಲ್ಲ. ದೇವಿಂದ್ರಪ್ಪನಿಗೆ ಮೊನಮ್ಮ ಎಂಬ ಮಗಳು ಇರುತ್ತಾಳೆ ಅನ್ನುವುದು ನಿಜ. ಸದರಿ ಮೊನಮ್ಮಗೆ ಈ ದಾವೆಯಲ್ಲಿ ಸೇರಿಸಿಲ್ಲ ಅನ್ನುವುದು ನಿಜ.

ಶ್ರೀ ಐ ಬಿ ಎ ವಕೀಲರು ಉಳಿದ ಪ್ರತಿವಾದಿಗೆಯರಿಗೆ ಪಾಟಿ ಸವಾಲಿಗಾಗಿ ಸಮಯ ಕೊರಿದ್ದು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ